# ಮಾರಿಗುಡಿ

ಊರೆಂದರೆ ಅಲ್ಲೊಂದು ಮಾರಿ ಗುಡಿ ಇರುತ್ತದೆ. 'ಮಾರಿ ಗುಡಿ' ಹೆಸರೇ ಹೇಳುವಂತೆ ಮಾರಿಯ ದೇವಾಲಯವನ್ನು ಗ್ರಾಮ ಭಾಷೆಯಲ್ಲಿ 'ಗುಡಿ' ಎನ್ನುತ್ತಾರೆ. 'ಗುಡಿ' ಎಂದರೆ ಶಿಷ್ಟ ದೇವತೆಗಳನ್ನು ಪ್ರತಿಷ್ಠಾಪಿಸಿರುವ ಬೃಹತ್ ಕಟ್ಟಡಗಳು, ಅವುಗಳ ಶಿಲ್ಪ ವೈಭವ, ಕಲಾಬೆರಗನ್ನು ಕಲ್ಪಿಸಿಕೊಳ್ಳಲಾಗದು. 'ಗುಡಿ' ಎಂದರೆ ಜೋಪಡಿ ಎಂದೂ ಅರ್ಥವಿದೆ. ಬಹುಪಾಲು ಮಾರಿ ಗುಡಿಗಳಲ್ಲಿ ವಿಗ್ರಹಗಳು ಸರಿಯಾದ ರೂಪದಲ್ಲಿರುವುದಿಲ್ಲ; ಅದೊಂದು ಸಂಕೇತವೆಂಬಂತೆ ಅಮೂರ್ತ, ಅಸ್ಪಷ್ಟ ಆಕೃತಿ ಗುಡಿಯ ಗರ್ಭಭಾಗದಲ್ಲಿ ಕೂತಿರುತ್ತದೆ. ಈ ಗುಡಿಗಳ ವಿಸ್ತಾರವೂ ಕೇವಲ ಆರು ಆರೋ ಆರು ಐದೋ ಅಡಿಯಿರುತ್ತದೆ. ಆ ವಿಸ್ತಿರಣದ ನಡುವೆ 'ಮಾರಿ' ಕೂತಿರುತ್ತಾಳೆ; ಅದೊಂದು ಕಲ್ಲು. ಕುಂಕುಮ, ಹರಿಶಿಣ, ಕಾಡು ಹೂಗಳನ್ನು ಧರಿಸಿಕೊಂಡು ಒಂದು ಬಗೆಯ ಅಲೌಕಿಕ ವಾತಾವರಣವನ್ನು ಸೃಷ್ಟಿಸಿಕೊಂಡಿರುತ್ತದೆ.



'ಮಾರಿ' ಎಂದರೆ 'ನಾಶ'ವೆಂಬ ಅರ್ಥವೂ 'ಮೃತ್ಯು ದೇವತೆ' ಎಂಬ ಅರ್ಥವೂ ಇದೆ. ಭಯಾನಕ ಸಾಂಕ್ರಮಿಕ ರೋಗಗಳನ್ನು ಮಾಡುವ ನಾಶಕಾರಕಳೆಂಬ ಪ್ರತಿಷ್ಠ್ಯವನ್ನು ಮಾರಿಯರು ರೂಢಿಸಿಕೊಂಡಿರುತ್ತಾರೆ. ಆದ್ದರಿಂದ ಅವರು ಸಮುದಾಯಗಳಲ್ಲಿ ಭಯವನ್ನೂ ನಿಗೂಢವಾದ ಕುತೂಹಲವನ್ನು ಮೂಡಿಸಿರುತ್ತಾರೆ. ಅವರನ್ನು ಶಿಷ್ಟರು 'ಕ್ಷುದ್ರ ದೇವತೆ'ಗಳೆಂದು ಕರೆಯುತ್ತಾರೆ. ಆ ಕಲ್ಪನೆಗನುಗುಣವಾಗಿ ಅವರು ಶೀಘ್ರ ಕೋಪಿಗಳೂ ಪೀಡಕರೂ ಎಂಬ ಪಟ್ಟಕಟ್ಟಿಕೊಂಡಿರುತ್ತಾರೆ. ತನ್ನ ಭಕ್ತರನ್ನು ಮಾರಿಯರು ಹೆದರಿಸಿಟ್ಟುಕೊಂಡಿರುತ್ತಾರೆ; ಭಕ್ತರು ಕೂಡ ಭಯ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಗ್ರಾಮದಲ್ಲಿ ನೀತಿ ನಿಯಮ, ದಾನ ಧರ್ಮಗಳ ಸ್ವಯಂ ಕಟ್ಟುಗಳಲ್ಲಿ ಬದುಕುತ್ತಾರೆ. 'ಮಾರಿ' ಮುನಿದಾಳು' ಎಂಬ ಎಚ್ಚರಿಕೆಯ ಕತ್ತಿ ಅವರ ಮನದ ತಲೆಯ ಮೇಲೆ ಸದಾ ಇರುತ್ತದೆ. ಇದೊಂದು ಬಗೆಯ ಮನಶಾಸ್ತ್ರೀಯ ನೆಲೆಯ ಕಟ್ಟು, ತಮ್ಮ ತಮ್ಮಲ್ಲಿಯೇ ಮಾಡಿಕೊಂಡ ನೈತಿಕ ಪ್ರಜ್ಞೆಯ ಜಾಗೃತಿಯ ಅನಾವರಣ.

ಈ ಮಾರಿಯರು ಮಾಂಸಾಹಾರಿಗಳು. ಅವರಿಗೆ ರಕ್ತವೆಂದರೆ ಇಷ್ಟ. ಕೋಳಿ ಕುರಿ ಮೇಕೆ ಕೋಣ ಮುಂತಾದ ಪ್ರಾಣಿಗಳ ರಕ್ತವನ್ನು ಅವರಿಗೆ ನಿಯಮಿತವಾಗಿ ಅರ್ಪಿಸಬೇಕು. ಆ ಅರ್ಪಣೆಗೆಂದೇ ಹಬ್ಬಗಳನ್ನು ಮಾಡಬೇಕು. ಈ ಮಾರಿಯರು ಶೂದ್ರರ ದೇವತೆಗಳು. ನಮ್ಮ ನಾಡಿನಲ್ಲಿ ಶೂದ್ರರೆಲ್ಲರೂ ಮಾಂಸಾಹಾರಿಗಳು. (ಅಲ್ಲೊಂದು ಇಲ್ಲೊಂದು ಅನ್ಯಪ್ರಭಾವ ಕಾರಣದಿಂದ ಮಾಂಸ ತ್ಯಜಿಸಿರುವ ಜಾತಿಗಳಿರಬಹುದು) ಎಂದೂ ಜನತೆ ತಮ್ಮಂತೆಯೇ ತಮ್ಮ ದೇವರುಗಳನ್ನು ಸೃಜಿಸಿಕೊಳ್ಳುತ್ತಾರೆ. ತಾವು ತಿನ್ನುವ ಆಹಾರವನ್ನು ಅವರಿಗೂ ಆರೋಪಿಸುತ್ತಾರೆ. ಅಷ್ಟರಮಟ್ಟಿಗೆ ಸಮಾನತೆ ಪ್ರಾಪ್ತವಾಗುತ್ತದೆ. ನಮ್ಮ ಕರುನಾಡ ಬಹುಮುಖ್ಯ ದೇವತೆಯಾದ ಚಾಮುಂಡಿಯು ಕೂಡ ಮಾರಿಯೇ! ಅವಳಿಗೆ ಮೈಸೂರಿನ ಜನ 'ಮರಿ' ಕಡಿದು ಅದ್ದೂರಿಯಾಗಿ ವರ್ಷಕ್ಕೊಮ್ಮೆ ಹಬ್ಬ ಆಚರಿಸುತ್ತಾರೆ. ಮೈಸೂರಿನ ಮೂಲವಾಸಿಗಳೆಲ್ಲರ ಮನೆ ಮನೆಯಲ್ಲೂ ಅಂದು 'ಬಾಡಿನ ವಾಸನೆ' ಹರಿದಾಡುತ್ತದೆ. ಈ ಮಾರಿ ಚಾಮುಂಡಿ ಮೈಸೂರು ಅರಸರ ಮನೆ ದೇವತೆಯಾದ ಮೇಲೆ ಅವಳಿಗೆ ಶಿಷ್ಟರೂಪ ಕೊಡಲು ಯತ್ನಿಸಲಾಯಿತು. ಆದರೂ ಅವಳು ಎಂದಿಗೂ ಮಾರಿಯೇ. ಬಹಳ ಹಿಂದೆ ಬೆಟ್ಟದ ಮೇಲೆಯೇ ಅವಳಿಗೆ 'ಮರಿ ಬಲಿ' ನೀಡಲಾಗುತ್ತಿತ್ತು. ಇಂದಿಗೂ ಚಾಮುಂಡಿ ದೇವಾಲಯದ ದಕ್ಷಿಣದ ಮಗ್ಗಲಿಗೆ ಒಂದು ಬಲಿ ಅರೆ ಇದೆ. ಇವಳ ತಂಗಿ ಉತ್ತನಹಳ್ಳಿ ಮಾರಿ ಕೂಗಳತೆಯಲ್ಲಿಯೇ ಇದೆ. ಇವರಿಬ್ಬರ ಬಗ್ಗೆ ವಿಪುಲವಾದ ಜನಪದ ಕಾವ್ಯ ಇದೆ.

ಮಾರಿಯರು ಮಾತೃಪ್ರಧಾನ ಸಂಸ್ಕೃತಿಯ ರೂಪಗಳು! ನಿಮಗೆ ಆಶ್ಚರ್ಯವಾಗಬಹುದು– ಈ ದೇವತೆಗಳೆಲ್ಲರೂ ಹೆಂಗಸರೇ! ಗ್ರಾಮ್ಯ ದೇವತೆಗಳಲ್ಲಿ 'ಗಂಡು ದೇವತೆ'ಗಳೇ ಇಲ್ಲ. ಅವರೆಲ್ಲರೂ ಗ್ರಾಮ ಪರಿಸರದಲ್ಲಿ ಹುಟ್ಟಿ ಬೆಳೆದು ಊರ ಹಿತಕ್ಕಾಗಿ ಬಲಿಯಾದ ಸಮುದಾಯ ಮುಖಿ ಹೆಣ್ಣುಗಳು. ಕೆರೆಗೋ ಮತ್ತೊಂದಕ್ಕೊ 'ಆಹಾರ'ವಾಗಿ, ಅನಂತರ ತಮ್ಮ ತ್ಯಾಗ ಕಾರಣದಿಂದಾಗಿಯೇ ಮಾರಿಯರಾಗಿ ಪರಿವರ್ತನೆಗೊಂಡು ಪೂಜನೀಯರಾದರು. ಇಲ್ಲಿ ಗಂಡಸು ಅಮಾನ್ಯ. ಅವನು ಸ್ತ್ರೀಯಷ್ಟು ತ್ಯಾಗಜೀವಿಯಲ್ಲ, ಸಮುದಾಯ ಜೀವಿಯಲ್ಲ! ಹೀಗಾಗಿ 'ಆಹಾರ'ವಾಗದೆ ಹೊರಗುಳಿದುಬಿಡುತ್ತಾನೆ. ಅಥವಾ ಪುರುಷನ ಕ್ರೌರ್ಯವೂ 'ಆಹಾರ'ವಾಗುವುದರ ಹಿಂದೆ ಕೆಲಸ ಮಾಡಿದೆ ಎಂದು ತಿಳಿಯಬೇಕು. ಮಾರಿಯರನ್ನು ಅಧ್ಯಯನ ಮಾಡುವುದರ ಮೂಲಕ ಸ್ತ್ರೀ ಸಂಸ್ಕೃತಿಯ ಚರಿತ್ರೆಯನ್ನು, ಪರಿವರ್ತನಾಶೀಲ ಸಾಮಾಜಿಕತೆಯನ್ನು ಅರಿಯಬಹುದು.

ಶಿಷ್ಟ ದೇವತೆಗಳೆಲ್ಲರೂ ಗಂಡುಗಳು. ಅಲ್ಲಿ ಬರುವ ಸ್ತ್ರೀ ದೇವತೆಗಳು ಪುರುಷ ದೇವತೆಗಳ ಪತ್ನಿಯರು ಅಥವಾ ಸಂಬಂಧಿಗಳು. ಅಲ್ಲಿ ಅವರಿಗೆ ಅಗ್ರಸ್ಥಾನವಿಲ್ಲ, ಎರಡನೆಯ ಸ್ಥಾನ. ಇದು ಪುರುಷ ಪ್ರಧಾನ ಸಂಸ್ಕೃತಿಯ ಪ್ರತಿರೂಪ.

■ ಶಿಕಾಕು

